**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\1364\2016\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:20/02/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಕೆ.ಜಿ.ಎಫ್ ಮಾರಿಕುಪ್ಪ ಗ್ರಾಮ ಪಂಚಾಯತ್‌ನ 1) ಕಾರ್ಯದರ್ಶಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಜಿ.ವರದರಾಜುಲು [ಪ್ರಸ್ತುತ ಮುಳಬಾಗಿಲು ತಾಲ್ಲೂಕ್ ಸೊನ್ನವಾಡಿ ಗ್ರಾಮ ಪಂಚಾಯತ್, 2) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ವಿ.ಜಯರಾಮ [ಪ್ರಸ್ತುತ ನಿವೃತ್ತ], 3) ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ವಿ.ವೆಂಕಟಸ್ವಾಮಿ [ಪ್ರಸ್ತುತ ಕಾರ್ಯದರ್ಶಿ–1ನೇ ಶ್ರೇಣಿ, ಘಟ್ಟ ಮಾದಮಂಗಲ ಗ್ರಾಮ ಪಂಚಾಯತ್] ಮತ್ತು 4) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಎಸ್.ಜಯರಾವ್ [ಪ್ರಸ್ತುತ ನಿವೃತ್ತ] ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಕೋಲಾರ ಜಿಲ್ಲೆ ಕೆ.ಜಿ.ಎಫ್ ಆಂಡರ್‌ಸನ್ ಪೇಟೆ ಎಂ.ಕೊತ್ತೂರು ಗ್ರಾಮದ ನಿವಾಸಿಯಾದ ಶ್ರೀ.ಎಂ.ಬಾಬು ಬಿನ್ ಮುನಿಸ್ವಾಮಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಕೆ.ಜಿ.ಎಫ್ ಮಾರಿಕುಪ್ಪ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಕೋಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕ್ ಮಾರಿಕುಪ್ಪ ಗ್ರಾಮ ಪಂಚಾಯತ್‌ನಲ್ಲಿ 2011 ರಿಂದ 2015 ರವರೆಗೆ ಎಸ್‌ಸಿ\ ಎಸ್‌ಟಿ ಶೇ.25 ಮೀಸಲಾತಿ ಅನುದಾನ ದುರ್ಬಳಕೆಯಾಗಿದೆ ಹಾಗೂ ಸದರಿ ಅವಧಿಯಲ್ಲಿ ಚುನಾಯಿತ ಜನಪ್ರತಿನಿಧಿಗಳು ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರ ಮಾಡಿರುವುದು ಕಂಡು ಬಂದಿದೆ ಮತ್ತು ಸದರಿ ಅನುದಾನವನ್ನು ಇತರೆ ಕಾರ್ಯಗಳಿಗೆ ಬಳಸಲಾಗಿದೆಯೆಂದು ಹೇಳಿದ್ದಾರೆ.

3. ದೂರಿನ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಈ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ರವರಿಗೆ ಕೇಳಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು–1 (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

1) 2011–12ನೇ ಸಾಲಿಗೆ ಸಂಬಂಧಿಸಿದಂತೆ, ದಿನಾಂಕ:12/11/2010 ರಿಂದ 07/03/12ರ ಅವಧಿಯಲ್ಲಿ ಶ್ರೀ.ಜೆ.ವರದರಾಜುಲು, ಕಾರ್ಯದರ್ಶಿರವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ದೂರುದಾರರು ಹಾಜರುಪಡಿಸಿದ ಮಾಹಿತಿಯನ್ನಾಧರಿಸಿ, ಡಿಸಿ ಬಿಲ್ ವಹಿ, ಬಿಲ್ಲು ಮತ್ತು ವೋಚರ್‌ಗಳನ್ನು ಸದರಿ ಶ್ರೀ.ಜೆ.ವರದರಾಜುಲು ರವರು ಹಾಜರುಪಡಿಸಿದ್ದು, ದಿನಾಂಕ:20/01/12ರ ಚೆಕ್ ಸಂಖ್ಯೆ:383921ರಲ್ಲಿ ಶ್ರೀ.ರಾಮಚಂದ್ರಪ್ಪ ರವರಿಗೆ ₹5,000/–ಗಳು ಮತ್ತು ದಿನಾಂಕ:31/01/12ರ ಚೆಕ್ ಸಂಖ್ಯೆ:383923ರಲ್ಲಿ ₹4,855/–ಗಳನ್ನು ನೀಡಿರುವುದು ತಿಳಿದು ಬಂದಿದ್ದು, ಎಸ್‌ಸಿ\ ಎಸ್‌ಟಿ ಜನರು ವಾಸವಿರುವ ಜಾಗಗಳಲ್ಲಿ ಕುಡಿಯುವ ನೀರು ಪೂರೈಕೆಯ ಬಾಬ್ತು ರಿಪೇರಿ ಸಾಮಗ್ರಿಗಳ ಖರೀದಿಗಾಗಿ ವಿನಿಯೋಗವಾಗಿದ್ದು, ಮೀಸಲಾತಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸದೇ ಇರುವುದು ಗಮನಿಸಿದೆ;

2) 2012–13ನೇ ಸಾಲಿಗೆ ಸಂಬಂಧಿಸಿದಂತೆ, ದಿನಾಂಕ:02/04/12 ರಿಂದ 31/07/13ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ.ವಿ.ಜಯರಾಂ (ಹಾಲೀ ನಿವೃತ್ತ) ರವರು ಹಾಜರುಪಡಿಸಿದ ಡಿ.ಸಿ ಬಿಲ್ ವಹಿ, ನಗದು ಪುಸ್ತಕ, ಬ್ಯಾಂಕ್ ತಃಖ್ತೆ ಮುಂತಾದ ದಾಖಲೆಗಳನ್ನು ಪರಿಶೀಲಿಸಲಾಗಿ, ದಿನಾಂಕ:14/04/12ರ ಅಂಬೇಡ್ಕರ್ ಜಯಂತಿ ಉತ್ಸವ ಮತ್ತು ವಿವಿಧ ಕಾರ್ಯಕ್ರಮಗಳಿಗಾಗಿ ಖರ್ಚಾಗಿರುವ ಹಣದ ಬಾಬ್ತು ಶ್ರೀ.ರಾಧಪ್ಪ ಎಂಬುವವರಿಗೆ ₹13,000/–ಗಳನ್ನು ದಿನಾಂಕ:23/04/12ರ ಚೆಕ್ ನಂ.383924ರ ಮೂಲಕ ನೀಡಿದೆ. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ಚಿತ್ರಸಂಪುಟ 8 ಪುಸ್ತಕಗಳನ್ನು ಸರಬರಾಜು ಮಾಡಿರುವ ಮೆ॥ಅಶೋಕ ಪಬ್ಲಿಕೇಷನ್, ಬೆಂಗಳೂರು ರವರಿಗೆ ₹6,000/–ಗಳನ್ನು ಪಾವತಿಸುವ ಬಾಬ್ತು ಶ್ರೀ.ಬಿ.ಲೋಕೇಶ್ ರವರ ಹೆಸರಿನಲ್ಲಿ ದಿನಾಂಕ:25/04/12ರ ಚೆಕ್ ನಂ.383925ನ್ನು ನೀಡಿದೆ. ಎಸ್‌ಸಿ\ಎಸ್‌ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಪ್ರೋತ್ಸಾಹಿಸಲು ಆಯೋಜಿಸಲಾಗಿರುವ 6ನೇ ಪ್ರತಿಬಾ ಪುರಸ್ಕಾರ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ನೀಡಲಾಗಿರುವ ವಂತಿಗೆಯ ಬಾಬ್ತು ₹4,000/–ಗಳನ್ನು ಶ್ರೀ.ಎನ್.ಎಸ್.ರಾಮಪ್ಪ ರವರ ಹೆಸರಿನಲ್ಲಿ ದಿನಾಂಕ:29/01/13ರ ಚೆಕ್ ನಂ.383927ನ್ನು ನೀಡಿದೆ. ಆದ್ದರಿಂದ, ಮೀಸಲಾತಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸದೇ ಇರುವುದು ಗಮನಿಸಿದೆ;

3) 2013–14ನೇ ಸಾಲಿಗೆ ಸಂಬಂಧಿಸಿದಂತೆ, ದಿನಾಂಕ:06/08/13 ರಿಂದ 01/08/14ರವರೆಗೆ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ.ವಿ.ವೆಂಕಟಸ್ವಾಮಿ ರವರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಬೈನೇಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಎಸ್‌ಸಿ\ಎಸ್‌ಟಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ 60 ಸ್ಟೀಲ್ ತಟ್ಟೆಗಳು ಮತ್ತು 60 ಲೋಟಗಳನ್ನು ಸಾಗರ ಸ್ಟೀಲ್ ಹೌಸ್, ಕೆ.ಜಿ.ಎಫ್ ರವರಿಂದ ಹಾಗೂ ಸದರಿ ಶಾಲೆಯ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ಜಿ.ಆರ್.ಕ್ಯಾಸೆಟ್ರಾನಿಕ್ಸ್, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್ ರವರಿಂದ ಖರೀದಿಸಿದ ಬಾಬ್ತು ಹಣವನ್ನು ದಿನಾಂಕ:10/09/13ರ ಚೆಕ್ ನಂ.383930 ಮತ್ತು 383931ರ ಮೂಲಕ ಕ್ರಮವಾಗಿ, ₹4,800/– ಮತ್ತು ₹1,680/–ಗಳನ್ನು ನೀಡಿದೆ. ಮುಂದುವರೆದು, 13ನೇ ಹಣಕಾಸು

BD/1364/16



ಆಯೋಗದ ಕ್ರಿಯಾ ಯೋಜನೆಯಲ್ಲಿ ಕಳ್ಳಿಗುಪ್ಪ ಗ್ರಾಮದ ಎಸ್‌ಸಿ ಕಾಲೋನಿ ಮತ್ತು ಬೋವಿ ಕಾಲೋನಿಯಲ್ಲಿ ಎರಡು ನೀರಿನ ಸಿಸ್ಟರ್ನ್ ಅಳವಡಿಸಿದ ಬಾಬ್ತು ಶ್ರೀ.ಕೃಷ್ಣಮೂರ್ತಿ ರವರಿಗೆ ದಿನಾಂಕ:11/10/13ರ ಚೆಕ್ ನಂ.383932ರ ಮೂಲಕ ₹49,980/-ಗಳನ್ನು ನೀಡಿದೆ. ಆದ್ದರಿಂದ, ಮೀಸಲಾತಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸದೇ ಇರುವುದು ಗಮನಿಸಿದೆ;

4) 2014-15ನೇ ಸಾಲಿಗೆ ಸಂಬಂಧಿಸಿದಂತೆ, ದಿನಾಂಕ:06/08/13 ರಿಂದ 01/08/14ರವರೆಗೆ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ.ವಿ.ವೆಂಕಟಸ್ವಾಮಿ ರವರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಬಾಣಗೆರೆ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿ, ಎಂ.ಕೊತ್ತೂರು ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿ ಮತ್ತು ನೀಲಗಿರಿ ಹಳ್ಳಿ ಗ್ರಾಮದ ಬೋವಿ ಕಾಲೋನಿಗಳಲ್ಲಿ ಗ್ರಾಮ ನೈರ್ಮಲ್ಯ ಬಾಬ್ತು ಹಾಗೂ ನೀಲಗಿರಿ ಹಳ್ಳಿ ಗ್ರಾಮಕ್ಕೆ ನೀರಿನ ಸರಬರಾಜಿನ ಪೈಪಿಗೆ ಟಿ-ಕಾಲರನ್ನು ಖರೀದಿಸಿದ ಬಾಬ್ತು ಒಟ್ಟು ₹54,114/-ಗಳನ್ನು ದಿನಾಂಕ:07/05/14ರ ಚೆಕ್ ನಂ.383934ರ ಮೂಲಕ ವ್ಯಯಿಸಿದೆ. ಆದ್ದರಿಂದ, ಮೀಸಲಾತಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸದೇ ಇರುವುದು ಗಮನಿಸಿದೆ;

5) ಶಾಸನಬದ್ಧ ಅನುದಾನದಲ್ಲಿ ಹಣ ಲಭ್ಯವಿಲ್ಲದ ಕಾರಣ ₹4,500/-ಗಳ ಪೇಪರ್ ಬಿಲ್ಲನ್ನು ಪದ್ಮ ನ್ಯೂಸ್ ಏಜೆನ್ಸಿಗೆ ನೀಡುವ ಬಾಬ್ತು ಎಸ್‌ಸಿ\ಎಸ್‌ಟಿ ಅನುದಾನದಲ್ಲಿ ಶ್ರೀ.ಸುರೇಶ್ ರವರಿಗೆ ದಿನಾಂಕ:07/05/14ರ ಚೆಕ್ ಸಂಖ್ಯೆ:383935ನ್ನು ನೀಡಿದೆ;

6) ಸ್ವಚ್ಛ ಭಾರತ್ ಯೋಜನೆ ಅಡಿಯಲ್ಲಿ ಸರ್ಕಾರದ ಸೂಚನೆಗಳಂತೆ ಸಾರ್ವಜನಿಕರಿಗೆ ಪ್ರಚಾರಗೊಳಿಸುವ ವೆಚ್ಚಕ್ಕಾಗಿ ₹10,000/-ಗಳನ್ನು ದಿನಾಂಕ:28/05/14ರ ಚೆಕ್ ನಂ.383936ರ ಮೂಲಕ ಪಾವತಿಸಿದೆ;

7) ದಿನಾಂಕ:10/05/14ರ ಚೆಕ್ ಸಂ.383937 ಮತ್ತು ದಿನಾಂಕ:17/05/14ರ ಚೆಕ್ ಸಂ:383938ರ ಮೂಲಕ ಕ್ರಮವಾಗಿ, ₹9,918/- ಮತ್ತು ₹9,826/-ಗಳನ್ನು ಚಿನ್ನಗಾನಹಳ್ಳಿ ಮತ್ತು ಬೀಮಗಾನಹಳ್ಳಿ ಗ್ರಾಮಗಳ ಪರಿಶಿಷ್ಟ ಜಾತಿ \ ಪಂಗಡ ಕಾಲೋನಿಗಳಲ್ಲಿ ಗ್ರಾಮ ನೈರ್ಮಲ್ಯತೆ ಕುರಿತು ವ್ಯಯಿಸಿದೆ. ಸದರಿ ಎರಡು ಗ್ರಾಮಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ದುರಸ್ತಿಗಾಗಿ ಖರೀದಿಸಿದ ಕಾಲರ್ ಬಾಬ್ತು ಕ್ರಮವಾಗಿ, ₹177/- ಮತ್ತು ₹85/-ಗಳನ್ನು ವ್ಯಯಿಸಿದೆ;

8) ಶ್ರೀ.ವೆಂಕಟಪ್ಪ, ನೀಲಗಿರಿಹಳ್ಳಿ ರವರು ಪರಿಶಿಷ್ಟ ಜಾತಿ \ ಪಂಗಡ ಜನಾಂಗದವರಾಗಿದ್ದು, ಸದರಿಯವರಿಗೆ ₹9,000/-ಸಹಾಯಧನ ಮಂಜೂರು ಮಾಡಿದ ಬಾಬ್ತು; ಮಾರಿಕುಪ್ಪ ಗ್ರಾಮದ ಕುಮಾರಿ.ಸ್ವಾತಿ ಬಿನ್ ರಾಮಚಂದ್ರಪ್ಪ ರವರಿಗೆ ಗಣಕಯಂತ್ರ ಖರೀದಿ ಬಾಬ್ತು ₹3,000/- ಸಹಾಯಧನ; ಮಾರಿಕುಪ್ಪ ಗ್ರಾಮದ ಶ್ರೀ.ರವಿಚಂದ್ರ ಬಿನ್ ವೆಂಕಟೇಶಪ್ಪ ರಾಮಚಂದ್ರಪ್ಪ ರವರಿಗೆ ₹3,000/-ಸಹಾಯಧನ; ಕೀರ್ತಿಕುಪ್ಪ ಗ್ರಾಮದ ಶಾಲಾ ಮುಂಭಾಗ ಸಮತಟ್ಟು ಮಾಡಿದ ಬಾಬ್ತು ದಿನಾಂಕ:12/01/15ರಂದು ₹6,000/- ಮತ್ತು ನೀಲಗಿರಿಹಳ್ಳಿ ಗ್ರಾಮದ ಕೆರೆ ಒತ್ತುವರಿ ತೆರವುಗೊಳಿಸಿದ ಬಾಬ್ತು ವಿನಾಯಕ ಎಂಟರ್‌ಪ್ರೈಸಸ್ ರವರಿಗೆ ₹27,000/-ಗಳನ್ನು ವ್ಯಯಿಸಿದ ಬಾಬ್ತು ನಗದು ವಹಿ, ಡಿ.ಸಿ ಬಿಲ್, ಪಂಚಾಯತ್ ಸಾಮಾನ್ಯ ಸಭೆ ನಡವಳಿ, ವಿದ್ಯಾರ್ಥಿಗಳ ವ್ಯಾಸಂಗ ಪ್ರಮಾಣ ಪತ್ರ, ಅಂಕಪಟ್ಟಿಗಳು, ಮುಂತಾದ ದಾಖಲೆಗಳನ್ನು ಪರಿಶೀಲಿಸಲಾಗಿ, ಮೀಸಲಾತಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸದೇ ಇರುವುದು ಗಮನಿಸಿದೆ. ಆದ್ದರಿಂದ, ದೂರಿನ ಆಪಾದನೆಗಳು ಸಾಬೀತಾಗಿಲ್ಲವೆಂದು ಹೇಳಿದ್ದಾರೆ.

4. ತನಿಖಾ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ತಮ್ಮ ಪ್ರತ್ಯುತ್ತರದಲ್ಲಿ-

ಗ್ರಾಮ ಪಂಚಾಯತ್ ಪೇಪರ್ ಬಿಲ್ಲಿನ ಬಾಬ್ತು ₹4,500/-, ಕೀರ್ತಿಕುಪ್ಪ ಗ್ರಾಮದ ಶಾಲಾ ಮುಂಭಾಗ ಸಮತಟ್ಟು ಮಾಡಿದ ಬಾಬ್ತು ₹6,000/- ಮತ್ತು ನೀಲಗಿರಿಹಳ್ಳಿ ಗ್ರಾಮದ ಕೆರೆ ಒತ್ತುವರಿ ತೆರವುಗೊಳಿಸಿದ ಬಾಬ್ತು ₹27,000/-ಗಳನ್ನು ಎಸ್‌ಸಿ\ಎಸ್‌ಟಿ ಮೀಸಲಾತಿ ಹಣದಲ್ಲಿ ಖರ್ಚು ಮಾಡಿರುವುದು ಕಾನೂನುಬಾಹಿರವಾಗಿದ್ದು, ಸದರಿ ಅನುದಾನವನ್ನು ಹೇಗೆ ಬಳಕೆ ಮಾಡಬೇಕೆಂಬ ಬಗ್ಗೆ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿದೆಯೆಂದು ಹೇಳಿದ್ದಾರೆ.

5. ದೂರಿಗೆ ಸಂಬಂಧಪಟ್ಟಂತೆ ಶೇ.25 ಎಸ್‌ಸಿ\ಎಸ್‌ಟಿ ಮೀಸಲಿಟ್ಟ ಅನುದಾನದಲ್ಲಿ ಮೇಲೆ ಹೇಳಿದ ಖರ್ಚುಗಳನ್ನು ಮಾಡಿದ ಅವಧಿಯಲ್ಲಿ ಶ್ರೀ.ಜೆ.ವರದರಾಜುಲು, ಶ್ರೀ.ವಿ.ಜಯರಾಂ, ಶ್ರೀ.ವಿ.ವೆಂಕಟಸ್ವಾಮಿ, ಮತ್ತು ಶ್ರೀ.ಎಸ್.ಜಯರಾವ್ ರವರು ಮಾರಿಕುಪ್ಪ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಗಳು \ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದು, ಸದರಿಯವರುಗಳನ್ನು ದೂರಿನಲ್ಲಿ 1 ರಿಂದ 4ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು 2011-12ನೇ ಸಾಲಿನಲ್ಲಿ ಮಾರಿಕುಪ್ಪ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಶೇ.25 ಎಸ್‌ಸಿ\ಎಸ್‌ಟಿ ಮೀಸಲಿಟ್ಟ ಅನುದಾನದಲ್ಲಿ ದಿನಾಂಕ:20/01/12ರ ಚೆಕ್ ಸಂಖ್ಯೆ:383921ರಲ್ಲಿ ₹5,000/- ಹಾಗೂ ದಿನಾಂಕ:31/01/12ರ ಚೆಕ್ ಸಂಖ್ಯೆ:383923ರಲ್ಲಿ ₹4,855/-ಗಳನ್ನು ಕ್ರಮವಾಗಿ, ಬಲಿಗಾನಹಳ್ಳಿ ಮತ್ತು ಕಂಬಂಪಲ್ಲಿ ಗ್ರಾಮಗಳ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಕುಡಿಯುವ ನೀರಿನ ನಿರ್ವಹಣೆಗಾಗಿ ಖರ್ಚು ಮಾಡಿರುವುದಾಗಿ ಹೇಳಿದ್ದಾರೆ.

6. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:02/04/12 ರಿಂದ 31/07/17(?) ರವರೆಗೆ ಮಾರಿಕುಪ್ಪ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ಕಾರ್ಯಾವಧಿಯಲ್ಲಿ- 1)ದಿನಾಂಕ:14/04/12ರಂದು ಡಾ॥ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಸಲುವಾಗಿ ₹13,000/-; 2)ಡಾ॥ಬಿ.ಆರ್.ಅಂಬೇಡ್ಕರ್ ರವರ ಚಿತ್ರಸಂಪುಟದ 8 ಪುಸ್ತಕಗಳ ಖರೀದಿಗಾಗಿ ಅಶೋಕ ಪಬ್ಲಿಕೇಷನ್ಸ್, ಬೆಂಗಳೂರು ರವರಿಗೆ ಮತ್ತು ₹6,000/-ವನ್ನು ಚೆಕ್ ಸಂಖ್ಯೆ:383925 ದಿನಾಂಕ:25/04/12ರಲ್ಲಿ; 3)ಡಾ॥ಬಿ.ಆರ್.ಅಂಬೇಡ್ಕರ್ ರವರ ಬರಹಗಳು ಮತ್ತು ಭಾಷಣಗಳು ಎಂಬ ಪುಸ್ತಕಗಳನ್ನು ಖರೀದಿಸಿದ ಬಾಬ್ತು ₹340/-ಗಳನ್ನು ಚೆಕ್ ಸಂಖ್ಯೆ:383926 ದಿನಾಂಕ:26/12/12ರಲ್ಲಿ; ಮತ್ತು 4) ಪರಿಶಿಷ್ಟ ಜಾತಿ \

1364/16



ಪಂಗಡ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಕ್ರಾಂತಿ ಜ್ಯೋತಿ ವಾರಪತ್ರಿಕೆಯವರಿಗೆ ₹4,000/-ಗಳನ್ನು ಚೆಕ್ ಸಂಖ್ಯೆ:383927 ದಿನಾಂಕ:29/06/13ರಲ್ಲಿ, ಹೀಗೆ ಒಟ್ಟು ₹23,340/-ಗಳನ್ನು ಖರ್ಚು ಮಾಡಿದೆ. ಖರ್ಚಿನ ಮೊತ್ತವನ್ನು ಸಂಬಂಧಪಟ್ಟವರಿಗೆ ನೇರವಾಗಿ ಚೆಕ್ ಮುಖಾಂತರ ನೀಡಿರುವುದರಿಂದ, ಅನುದಾನದ ಹಣವು ಯಾವುದೇ ರೀತಿಯಲ್ಲಿ ದುರುಪಯೋಗ ಆಗಿಲ್ಲವೆಂದು ಹೇಳಿದ್ದಾರೆ.

7. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಮ್ಮ ಮೇಲೆ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

8. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಾವು ಮಾರಿಕುಪ್ಪ ಗ್ರಾಮ ಪಂಚಾಯತ್‌ನಲ್ಲಿ 2014-15ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ್ದು, ತಮ್ಮ ಮೇಲೆ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

9. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 2011-12ನೇ ಸಾಲಿನಲ್ಲಿ ಶ್ರೀ.ರಾಮಚಂದ್ರ ಎಂಬುವವರಿಗೆ ದಿನಾಂಕ:20/01/12ರ ಚೆಕ್ ಸಂಖ್ಯೆ:383921ರಲ್ಲಿ ₹5,000/- ಮತ್ತು ಶ್ರೀ.ಶ್ರೀನಾಥ್ ಎಂಬುವವರಿಗೆ ದಿನಾಂಕ:31/01/12ರ ಚೆಕ್ ಸಂಖ್ಯೆ:383923ರಲ್ಲಿ ₹4,855/-ಗಳನ್ನು ನೀಡಲಾಗಿದೆಯೆಂದು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ಕೆ.ಜಿ.ಎಫ್ ಶಾಖೆಯಲ್ಲಿ ಪಂಚಾಯತ್ ಹೊಂದಿರುವ ಬ್ಯಾಂಕ್ ಖಾತೆಯ ತಃಖ್ತೆಯಲ್ಲಿ ಕಂಡು ಬಂದಿದೆ. ಸದರಿ ಹಣವನ್ನು ಬಲಿಗಾನಹಳ್ಳಿ ಮತ್ತು ಕಂಬಂಪಲ್ಲಿ (ಪರಿಶಿಷ್ಟ ಜಾತಿ \ ಪಂಗಡದ ಜನರು ವಾಸವಿದ್ದಾರೆಂದು ಹೇಳುವ ಹಳ್ಳಿಗಳು) ಗ್ರಾಮಗಳಲ್ಲಿ ಕುಡಿಯುವ ನೀರಿನ ರಿಪೇರಿ ಸಾಮಗ್ರಿಗಳ ಖರೀದಿಗಾಗಿ ಖರ್ಚು ಮಾಡಿದೆಯೆಂದು ಹೇಳಿದೆ. ಆದರೆ, ಸದರಿ ಖರ್ಚುಗಳಿಗೆ ಸಂಬಂಧಪಟ್ಟ ಎರಡೂ ಬಿಲ್ಲುಗಳು ಗ್ಲೋಬಲ್ ಹಾರ್ಡ್‌ವೇರ್, ಆಂಡರ್‌ಸನ್‌ಪೇಟೆ, ಕೆ.ಜಿ.ಎಫ್ ಹೆಸರಿನಲ್ಲಿದೆ. ಸದರಿ ಹಣ ಪಾವತಿ ಸಮಯಕ್ಕೆ 1ನೇ ಎದುರುದಾರರು ಮಾರೀಕುಪ್ಪ ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು;

2) ಎರಡನೇ (2ನೇ) ಎದುರುದಾರರ ಕರ್ತವ್ಯದ ಅವಧಿಯಲ್ಲಿ, ಅಂದರೆ 2012-13ನೇ ಸಾಲಿನಲ್ಲಿ ಶ್ರೀ.ರಾಧಪ್ಪ ಎಂಬುವವರಿಗೆ ದಿನಾಂಕ:26/04/12ರ ಚೆಕ್ ಸಂಖ್ಯೆ:383924ರಲ್ಲಿ ₹13,000/-; ಸಿ.ಬಿ ಡಿ.ಡಿ, ಬೆಂಗಳೂರು ರವರಿಗೆ ದಿನಾಂಕ:05/05/12ರ ಚೆಕ್ ಸಂಖ್ಯೆ:383925ರಲ್ಲಿ ₹6,000/- ಮತ್ತು ಶ್ರೀ.ಎಸ್.ಎನ್.ರಾಮಕೃಷ್ಣ ಎಂಬುವವರಿಗೆ ದಿನಾಂಕ:30/01/13ರ ಚೆಕ್ ಸಂಖ್ಯೆ:383927ರಲ್ಲಿ ₹4,000/-

ಗಳನ್ನು ನೀಡಲಾಗಿದೆಯೆಂದು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ಕೆ.ಜಿ.ಎಫ್ ಶಾಖೆಯಲ್ಲಿ ಪಂಚಾಯತ್ ಹೊಂದಿರುವ ಬ್ಯಾಂಕ್ ಖಾತೆಯ ತಃಖ್ತೆಯಲ್ಲಿ ಕಂಡು ಬಂದಿದೆ. ಅವುಗಳ ಪೈಕಿ ₹13,000/– ಹಣವನ್ನು ಅಂಬೇಡ್ಕರ್ ಜಯಂತಿಗಾಗಿ; ₹6,000/–ವನ್ನು ಡಾ॥ಬಿ.ಆರ್.ಅಂಬೇಡ್ಕರ್ ರವರ ಚಿತ್ರಸಂಪುಟದ 8 ಪುಸ್ತಕಗಳ ಖರೀದಿಗಾಗಿ ಅಶೋಕ ಪಬ್ಲಿಕೇಷನ್ಸ್, ಬೆಂಗಳೂರು ರವರಿಗೆ ಮತ್ತು ₹4,000/–ವನ್ನು ಕ್ರಾಂತಿ ಜ್ಯೋತಿ ವಾರಪತ್ರಿಕೆಯ 6ನೇ ಪತ್ರಿಕಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರಕ್ಕೆ ಪಂಚಾಯತಿಯು ಚಂದಾ ನೀಡಿದೆಯೆಂದು ಹೇಳಿದ ಬಾಬ್ತು ಇರುತ್ತದೆಂದು ದಾಖಲೆಗಳಲ್ಲಿ ಕಂಡು ಬಂದಿದೆ. ಸರ್ಕಾರದ ಸುತ್ತೋಲೆ ಸಂ:ಗ್ರಾಅಪ 440 ಗ್ರಾಪಂಅ 2015 ದಿನಾಂಕ:22/07/15ರಲ್ಲಿ ಸದರಿ ಖರ್ಚುಗಳಿಗೆ ಅವಕಾಶವಿಲ್ಲ;

3) 2013–14 ಮತ್ತು 2014–15ನೇ ಸಾಲಿನಲ್ಲಿ ದಿನಾಂಕ:06/08/13 ರಿಂದ 01/08/14ರ ಅವಧಿಯಲ್ಲಿ 3ನೇ ಎದುರುದಾರರು ಮಾರೀಕುಪ್ಪ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್‌ನ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿಯವರ ಕಾರ್ಯಾವಧಿಯಲ್ಲಿ ಶೇ.25 ಎಸ್‌ಸಿ\ಎಸ್‌ಟಿಗೆ ಮೀಸಲಿಟ್ಟ ಅನುದಾನದಲ್ಲಿ ಖರ್ಚು ಮಾಡಿದ ಹಣದ ವಿವರಗಳು ಈ ಕೆಳಕಂಡಂತಿದೆ –

| ಕ್ರ ಸಂ. | ಕಾಮಗಾರಿ / ಖರ್ಚಿನ ವಿವರ | ಚೆಕ್ ಸಂಖ್ಯೆ ಮತ್ತು ದಿನಾಂಕ | ಚೆಕ್ / ಹಣ ಪಡೆದವರ ವಿವರ | ಮೊತ್ತ ₹ ಗಳಲ್ಲಿ |
|---|---|---|---|---|
| 1 | 60 ಸ್ಟೀಲ್ ತಟ್ಟೆಗಳು ಮತ್ತು 60 ಲೋಟಗಳು | 383930, 10/09/13 | ಲಭ್ಯವಿಲ್ಲ | 4,800/– |
| 2 | ನೋಟ್ ಪುಸ್ತಕಗಳು | 383931 10/09/13 | ಲಭ್ಯವಿಲ್ಲ | 1,680/– |
| 3 | ಎರಡು ನೀರಿನ ಸಿಸ್ಟರ್ನ್ | 383932 11/10/13 | ಶ್ರೀ.ಕೃಷ್ಣಮೂರ್ತಿ | 49,980/– |
| 4 | ಗ್ರಾಮ ನೈರ್ಮಲ್ಯ ಮತ್ತು ನೀರಿನ ಸರಬರಾಜಿನ ಪೈಪಿಗೆ ಟಿ–ಕಾಲರ್ ಖರೀದಿ | 383934 07/05/14 | ಶ್ರೀ.ಸುರೇಶ್ | 54,114/– |
| 5 | ಪೇಪರ್ ಬಿಲ್ | 383935 07/05/14 | –– | 4,500/– |
| 6 | ಸ್ವಚ್ಛ ಭಾರತ್ ಯೋಜನೆಯ ನಾಮಫಲಕ | 383936 28/05/14 | ಶ್ರೀಮತಿ.ಲಕ್ಷ್ಮಿ | 10,000/– |
| 7 | ಚಿನ್ನಗಾನಹಳ್ಳಿ ಗ್ರಾಮ ನೈರ್ಮಲ್ಯ | 383937 10/05/14 | –– | 9,918/– |
| 8 | ಬೀಮುಗಾನಹಳ್ಳಿ ಗ್ರಾಮ ನೈರ್ಮಲ್ಯ | 383938 17/05/14 | ಹೆಚ್.ವೆಂಕಟೇಶಪ್ಪ | 9,826/– |
| 9 | ನೀಲಗಿರಿಹಳ್ಳಿ ಬೋವಿ ಕಾಲೋನಿಯಲ್ಲಿ ಚರಂಡಿ ಸ್ವಚ್ಛತೆ | 383939 10/07/14 | ಶ್ರೀ.ರಾಧಪ್ಪ | 21,010/– |

1364/16



ಕ್ರಮ ಸಂಖ್ಯೆ:4, 7, 8 ಮತ್ತು 9ರ ಕಾಮಗಾರಿಗಳು ಎಂಜಿಎನ್‌ಆರ್‌ಇಜಿ ಯೋಜನೆಯಡಿ ನಿರ್ವಹಿಸಲಾಗಿರುವ ದಾಖಲೆಗಳು ಕಡತದಲ್ಲಿ ಲಭ್ಯವಿದ್ದು, ಸದರಿ ಯೋಜನೆಯಡಿ ಕಾರ್ಯನಿರ್ವಹಿಸಿದ ಬಗ್ಗೆ ನಿರ್ವಹಿಸಬೇಕಾದ ದಾಖಲೆಗಳಿಲ್ಲ ಮತ್ತು ಕೂಲಿಗಾರರ ಬಾಬ್ತು ವೇತನ ಪಾವತಿ ಹಣವನ್ನು ಒಂದೇ ವ್ಯಕ್ತಿಗೆ ನೀಡಿರುವುದು ಕಂಡು ಬಂದಿದೆ. ಕ್ರಮ ಸಂಖ್ಯೆ:1, 2, 5 ಮತ್ತು 7 ಖರ್ಚುಗಳಿಗೆ ಸಂಬಂಧಿಸಿದಂತೆ, ಚೆಕ್ \ ಹಣ ಪಡೆದವರ ವಿವರ ಲಭ್ಯವಿಲ್ಲ. ಕ್ರಮ ಸಂಖ್ಯೆ-3ರಲ್ಲಿ ಹೇಳಲಾದ ಕಾಮಗಾರಿಗಳು ಎರಡು ಪ್ರತ್ಯೇಕ ಕಾಮಗಾರಿಗಳಾಗಿದ್ದು (ಕಳ್ಳಿಕುಪ್ಪ ಎಸ್‌ಸಿ ಕಾಲೋನಿಯ ಶ್ರೀ.ರಾಮೇಗೌಡರ ಮನೆಯ ಪಕ್ಕ ಒಂದು ಸಿಸ್ಟರ್ನ್ ಮತ್ತು ಎಸ್‌ಸಿ ಕಾಲೋನಿಯಲ್ಲಿ ಇನ್ನೊಂದು ಸಿಸ್ಟರ್ನ್) ಅದರ ಬಾಬ್ತು ಒಂದೇ ಚೆಕ್‌ನಲ್ಲಿ ಹಣವನ್ನು ನೀಡಿರುವುದು ಕಂಡು ಬಂದಿದೆ. ಡಿಸಿ ಬಿಲ್ ನಂ.1/2014-15ರ ಬಾಬ್ತು (ನೀಲಗಿರಿಹಳ್ಳಿ ಗ್ರಾಮದ ಕೊಳವೆ ಬಾವಿ ಹತ್ತಿರ ಟಿ-ಕಾಲರ್ ತಂದ ಬಾಬ್ತು) ₹61/-ನ್ನು ಜಲಗಾರ ರಾದ ಶ್ರೀ.ನಾರಾಯಣಸ್ವಾಮಿ ರವರಿಗೆ ನಗದಾಗಿ ನೀಡಿರುವುದು ಕಂಡು ಬಂದಿದೆ. ಸದರಿ ಸಾಮಗ್ರಿ ಖರೀದಿ ಹಾಗೂ ಕ್ರಮ ಸಂಖ್ಯೆ:1, 2 ಮತ್ತು 7 ಖರ್ಚುಗಳಿಗೆ ಬಾಬ್ತು ವೋಚರ್\ ಬಿಲ್ ಇರುವುದಿಲ್ಲ ಹಾಗೂ ಬಿಲ್ಲಿನಲ್ಲಿ ನಮೂದಾದ ವ್ಯಕ್ತಿ \ ಸಂಸ್ಥೆಗೆ ಚೆಕ್ ನೀಡದಿರುವುದು ಕಂಡು ಬಂದಿದೆ;

4) ಸರ್ಕಾರದ ಸುತ್ತೋಲೆ ಸಂ:ಗ್ರಾಅಪ 440 ಗ್ರಾಪಂಅ 2015 ದಿನಾಂಕ:22/07/15 ಮತ್ತು 01/02/2016ರಲ್ಲಿ ಎಸ್‌ಸಿ\ಎಸ್‌ಟಿ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮೀಸಲಿರಿಸಿದ ಅನುದಾನವನ್ನು ಹೇಗೆ ವಿನಿಯೋಗಿಸಬೇಕೆಂದು ಹೇಳಿದೆ. ಸದರಿ ದೂರಿಗೆ ಸಂಬಂಧಿಸಿದಂತೆ, ಗ್ರಾಮ ಪಂಚಾಯತ್ ಪೇಪರ್ ಬಿಲ್ಲಿನ ಬಾಬ್ತು ದಿನಾಂಕ:07/05/14ರ ಚೆಕ್ ಸಂಖ್ಯೆ:383935ರಲ್ಲಿ ₹4,500/-ಗಳನ್ನು; ಕೀರ್ತಿಕುಪ್ಪ ಗ್ರಾಮದ ಶಾಲಾ ಮುಂಭಾಗ ಸಮತಟ್ಟು ಮಾಡಿದ ಬಾಬ್ತು ದಿನಾಂಕ:24/01/15ರ ಚೆಕ್ ಸಂಖ್ಯೆ:2504ರಲ್ಲಿ ₹6,000/-ಗಳನ್ನು ಮತ್ತು ನೀಲಗಿರಿಹಳ್ಳಿ ಗ್ರಾಮದ ಕೆರೆ ಒತ್ತುವರಿ ತೆರವುಗೊಳಿಸಿದ ಬಾಬ್ತು ದಿನಾಂಕ:24/01/15ರ ಚೆಕ್ ಸಂಖ್ಯೆ:2505ರಲ್ಲಿ ₹27,000/-ಗಳನ್ನು ಎಸ್‌ಸಿ\ಎಸ್‌ಟಿ ಮೀಸಲಾತಿ ಹಣದಲ್ಲಿ ಖರ್ಚು ಮಾಡಿರುವುದು ಕಂಡು ಬಂದಿದೆ. ಸದರಿ ಖರ್ಚುಗಳು ನಿಯಮಬಾಹಿರವೆಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿ ಅವಧಿಯಲ್ಲಿ 4ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು;

5) ಮುಂದುವರೆದು, ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಗಳನ್ವಯ ಉನ್ನತ ಪದವಿ ಅಥವಾ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ \ ಪಂಗಡದ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳು ಮತ್ತು ಪುಸ್ತಕಗಳನ್ನು ಹೊರತುಪಡಿಸಿ ರೀಡಿಂಗ್ ಟೇಬಲ್, ಹೆಚ್ಚುವರಿ ಸಮವಸ್ತ್ರ, ಬ್ಯಾಗ್, ಛತ್ರಿ ಇತ್ಯಾದಿಗಳಿಗೆ ವಾರ್ಷಿಕವಾಗಿ ಗರಿಷ್ಟ ₹1,500/- ಸಹಾಯಧನವನ್ನು ಒಮ್ಮೆ ನೀಡಲು ಅವಕಾಶವಿದೆ. ಆದರೆ, ಮಾರಿಕುಪ್ಪ ಗ್ರಾಮದ ಕುಮಾರಿ.ಸ್ವಾತಿ ಬಿನ್ ರಾಮಚಂದ್ರಪ್ಪ ರವರಿಗೆ ಗಣಕಯಂತ್ರ ಖರೀದಿ ಬಾಬ್ತು ದಿನಾಂಕ:12/03/15ರ ಚೆಕ್ ಸಂಖ್ಯೆ:2502ರಲ್ಲಿ ₹3,000/- ಸಹಾಯಧನವನ್ನು ಮತ್ತು ಮಾರಿಕುಪ್ಪ ಗ್ರಾಮದ ಶ್ರೀ.ರವಿಚಂದ್ರ ಬಿನ್ ವೆಂಕಟೇಶಪ್ಪ ರವರಿಗೆ ಒಂದೇ ಸಾಲಿನಲ್ಲಿ ಅಂದರೆ,

ಏಕಕಾಲಕ್ಕೆ ಚೆಕ್ ಸಂಖ್ಯೆ:2503 ದಿನಾಂಕ:24/01/15ರಲ್ಲಿ ₹3,000/– ಸಹಾಯಧನವನ್ನು ನೀಡಿದೆ. ಸದರಿ ಅವಧಿಯಲ್ಲೂ ಸಹ 4ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು;

6) ಎರಡನೇ ಎದುರುದಾರರು ದಿನಾಂಕ:31/07/2013ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ಮೇಲಿನ ಉಪ ಖಂಡಿಕೆ–2ರಲ್ಲಿ ಹೇಳಿದ ಹಣದ ಅವ್ಯವಹಾರಕ್ಕೆ ಸದರಿಯವರು ಜವಾಬ್ದಾರರಾಗಿರುವುದರಿಂದ, ಕಾಲ ವಿಳಂಭವನ್ನು ಮನ್ನಿಸಬಹುದಾಗಿದೆ.

10. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 4ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 4ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಅದಲ್ಲದೆ, 1 ರಿಂದ 4ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2 ಮತ್ತು 4ನೇ ಎದುರುದಾರರು ಕ್ರಮವಾಗಿ, ದಿನಾಂಕ:31/07/2013 ಮತ್ತು 31/05/2018ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(**i**)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 2 ಮತ್ತು 4ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

1364/16



13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 2 ಮತ್ತು 4ನೇ ಎದುರುದಾರರು ಕ್ರಮವಾಗಿ, ದಿನಾಂಕ:31/07/2013 ಮತ್ತು 31/05/2018ರಂದು ನಿವೃತ್ತಿ ಹೊಂದಿದ್ದಾರೆ.

**(ನ್ಯಾಯಾಮೂರ್ತಿ ಎಸ್.ಆನಂದ)** 21/2
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**
20/2